O.S.No.:01/2018
P.W.:2

ಈ ದಿನ ದಿಃ17.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ- 2ನೇ ಪ್ರತಿವಾದಿ ಪರ ಶ್ರೀ ಕೆವಿಎಂ ವಕೀಲರಿಂದಃ**

1. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಸಂಬಂಧಿಸಿದ ಜಮೀನು ಹಾರೋಹಳ್ಳಿ ಗ್ರಾಮದಲ್ಲಿರುತ್ತದೆ. ನನಗೆ ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ನ್ಯಾಯಾಲಯದಿಂದ ಯಾವುದೇ ನೋಟಿಸ್ ಬಂದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ನಾನೇ ನನ್ನ ಸ್ವಃಇಚ್ಛೆಯಿಂದ ಬಂದು ಸಾಕ್ಷ್ಯ ನುಡಿಯುತ್ತಿದ್ದೇನೆ. ಈ ದಾವೆಯನ್ನು ವಾದಿ ಯಾವ ಪರಿಹಾರ ಕೋರಿ ಹೂಡಿದ್ದಾರೆಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಖಾಲಿ ಜಾಗ ಆಗಿರುತ್ತದೆ. ದಾವಾಸ್ವತ್ತಿನ ನಂಬರ್ 400/1 ಆಗಿರುತ್ತದೆ. ದಾವಾಸ್ವತ್ತಿನ ಪೂರ್ತಿ ಕಾನೇಸುಮಾರಿ ಸಂಖ್ಯೆಯನ್ನು ನನಗೆ ಹೇಳಲು ಆಗುವುದಿಲ್ಲ. ಈ ದಾವೆಯನ್ನು ಪೂರ್ವಪಶ್ಚಿಮ 35 ಅಡಿ, ಉತ್ತರದಕ್ಷಿಣ 70 ಅಡಿಗಳಿಗೆ ಸಂಬಂಧಿಸಿದಂತೆ ವಾದಿ ದಾವೆ ಹೂಡಿರುತ್ತಾರೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಎಲ್ಲಮ್ಮತಾಯಿ ದೇವಸ್ಥಾನ ಮತ್ತು ಖಾಲಿ ಜಾಗ ಇರುತ್ತದೆ, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ. ದಾವಾಸ್ವತ್ತಿನ ಪೂರ್ವಕ್ಕೆ ದೇವಸ್ಥಾನದ ನಂತರ ಖಾಲಿ ಜಾಗ ಬರುತ್ತದೆ ಎಂದು ದಾವಾ ಷೆಡ್ಯೂಲ್ ನಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿಯು ದೇವಸ್ಥಾನ ಮತ್ತು ಖಾಲಿ ಜಾಗ ಅಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ.

2. ದಾವಾಷೆಡ್ಯೂಲ್ ನಲ್ಲಿ ತೋರಿಸಿದ ಕಾನೇಸುಮಾರಿ ನಂಬರ್, ಅದರ ವಿಸ್ತೀರ್ಣ ಮತ್ತು ಎಲ್ಲಾ ಚಕ್ಕುಬಂದಿ ತಪ್ಪಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ನಾನು ನೋಡಿರುತ್ತೇನೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಆ ಪೋಟೋದಲ್ಲಿರುವ ಇಬ್ಬರು ವ್ಯಕ್ತಿಗಳು ಈ ಪ್ರಕರಣದ ಪ್ರತಿವಾದಿಗಳು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಟೋವನ್ನು ನೋಡಿ ಹೌದು ಎಂದು ನುಡಿಯುತ್ತಾರೆ.

ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಒಪ್ಪಿ ಕೊಂಡ ಕಾರಣಕ್ಕೆ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3 ರಲ್ಲಿ ಪ್ರತಿವಾದಿಗಳು ನಿಂತಿರುವ ಸ್ಥಳವೇ ಈ ದಾವೆಯ ದಾವಾಸ್ವತ್ತು ಎಂದರೆ ಸರಿಯಲ್ಲ. ನಿಡಿ-3ರ ಎಡಭಾಗದಲ್ಲಿ ನಿಂತಿರುವ ಮಹಿಳೆಯು 2ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. ನಿಡಿ-3ರಲ್ಲಿ ಕಾಣಿಸುತ್ತಿರುವ ನಾಡಹೆಂಚಿನ ಎರಡು ಮನೆಗಳು ಮತ್ತು ಪಕ್ಕದ ಖಾಲಿ ಜಾಗವೇ ಈ ದಾವೆಯ ದಾವಾಸ್ವತ್ತು ಎಂದರೆ ಸರಿಯಲ್ಲ. ಹಾಗದರೆ ನೀವು ಈ ಮೇಲೆ ಹೇಳಿದ ಚಕ್ಕುಬಂದಿಯ ನಡುವೆ ನಿಡಿ-3ರಲ್ಲಿ ಕಾಣಿಸುತ್ತಿರುವ ಎರಡು ನಾಡಹೆಂಚಿನ ಮನೆಗಳು ಬರುವುದಿಲ್ಲವೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಬರುತ್ತವೆ, ಅದರೆ ಅವುಗಳ ವಾದಿಗೆ ಸೇರಿದ್ದು ಎಂದು ನುಡಿಯುತ್ತಾರೆ.

3. ನಿಡಿ-1ರಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ಈ ದಾವೆಯ ಪ್ರತಿವಾದಿಗಳು ಎಂದರೆ ಸರಿ. ನಿಡಿ-1ರಲ್ಲಿ ಕಾಣಿಸುತ್ತಿರುವ ಮನೆಯೇ ನಿಡಿ-3ರಲ್ಲಿರುವ ಮನೆ ಎಂದರೆ ಸರಿ. ನಿಡಿ-2ರಲ್ಲಿ ಕಾಣಿಸುತ್ತಿರುವ ಖಾಲಿ ಜಾಗವೇ ದಾವಾಸ್ವತ್ತು ಎಂದರೆ ಸರಿ. ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿ ಆ ಪೋಟೊಗಳಲ್ಲಿರುವ ವ್ಯಕ್ತಿಗಳ ಪೈಕಿ ಒಬ್ಬರು ಈ ದಾವೆಯ ಒಂದನೇ ಪ್ರತಿವಾದಿ ಮತ್ತು ಇನ್ನೋಬ್ಬರು 2ನೇ ಪ್ರತಿವಾದಿಯ ಹೆಂಡತಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಟೋಗಳನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಒಪ್ಪಿ ಕೊಂಡ ಕಾರಣಕ್ಕೆ ಅವುಗಳನ್ನು ಕ್ರಮವಾಗಿ ನಿಡಿ-4 ಮತ್ತು ನಿಡಿ-5 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ದಾವಾಸ್ವತ್ತಿನಲ್ಲಿರುವ ಮನೆಯಲ್ಲಿ ಪ್ರತಿವಾದಿಗಳು ಕಾರ್ಯಕ್ರಮ ಮಾಡಿದಾಗ ತೆಗಿಸಿದಂತಹ ಪೋಟೋ ಇದಾಗಿರುತ್ತದೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಟೋವನ್ನು ನೋಡಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

4. ನಿಡಿ-3ರ ಹಿಂಭಾಗದಲ್ಲಿ ಕಾಣಿಸುತ್ತಿರುವ ಮನೆ ಹಳೆಯದಾಗಿದ್ದು, ಸ್ವಲ್ಪ

ಬಿದ್ದುಹೋಗಿತ್ತು ಎಂದರೆ ಸರಿ. ಸದರಿ ಮನೆಯು ಬಿದ್ದು ಹೋಗಿದ್ದಕ್ಕಾಗಿ ಪ್ರತಿವಾದಿಗಳು ಸರ್ಕಾರದಿಂದ ಆ ಸಂಬಂಧ 50ಸಾವಿರ ರೂಪಾಯಿಗಳನ್ನು ಪರಿಹಾರದ ಹಣವನ್ನು ಸಹ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆ ಮನೆಯಲ್ಲಿ ವಾದಿಯ ಅಕ್ಕ ಜಯಮ್ಮ ರವರು ವಾಸವಿದ್ದರು ಎಂದು ನುಡಿಯುತ್ತಾರೆ. ವಾದಿಯ ಅಕ್ಕ ಜಯಮ್ಮ ರವರು ಆ ಮನೆಯಲ್ಲಿ ವಾಸವಿದ್ದಾರೆ ಎಂದು ನಾನು ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿ. ಸದರಿ ಮನೆಯು ಬಿದ್ದುಹೋದ ಕಾರಣಕ್ಕಾಗಿ ಅದನ್ನು ಪ್ರತಿವಾದಿಗಳೆ ಕೆಡವಿ ನೆಲಸಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಕೆಡವಲು ಪ್ರತಿವಾದಿಗಳು ಸರ್ಕಾರದಿಂದ ಅನುಮತಿಯನ್ನು ಸಹ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

5. ನಿಡಿ-3ರಲ್ಲಿ ಹಿಂಭಾಗದಲ್ಲಿ ಕಾಣಿಸುತ್ತಿರುವ ಮನೆಯು ಈಗ ಬಿದ್ದು ಹೋದ ಕಾರಣಕ್ಕೆ ಆ ಜಾಗದಲ್ಲಿ ಯಾವುದೇ ಮನೆ ಇಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಕೆಡವಿ ನೆಲಸಮ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವಂತಹ ಎರಡು ನಾಟಿಹೆಂಚಿನ ಮನೆಗಳು ಮತ್ತು ಖಾಲಿ ಜಾಗ ಇರುವ ಪೂರ್ತಿ ಸ್ವತ್ತು ಪ್ರತಿವಾದಿಗಳ ಮೂಲ ಪುರುಷನಾದ ವೆಂಕಟಪ್ಪ ಎನ್ನುವವರಿಗೆ ಸೇರಿದ್ದು ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ವೆಂಕಟಪ್ಪ ರವರು ಅವರ ಕುಟುಂಬದವರೊಂದಿಗೆ 80 ವರ್ಷಗಳಿಂದಲ್ಲೂ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವೆಂಕಟಪ್ಪ ರವರು ಮರಣ ಹೊಂದಿದ ನಂತರ ಅವರ ಮಕ್ಕಳಾದ ರಾಮಕೃಷ್ಣ ಮತ್ತು ದೇವರಾಜು ರವರು ದಾವಾಸ್ವತ್ತಿನಲ್ಲಿರುವ ಮನೆಗಳಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ರಾಮಕೃಷ್ಣ ಮತ್ತು ದೇವರಾಜು ರವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ.

1ನೇ ಪ್ರತಿವಾದಿಯು ಸದರಿ ದೇವರಾಜು ರವರ ಹೆಂಡತಿ ಎಂದರೆ ಸರಿ ಮತ್ತು 2ನೇ ಪ್ರತಿವಾದಿ ದೇವರಾಜು ರವರ ಮಗ ಎಂದರೆ ಸರಿ. ಸದರಿ ದೇವರಾಜು ಮತ್ತು ರಾಮಕೃಷ್ಣ ರವರು ಮರಣ ಹೊಂದಿದ ನಂತರ ದಾವಾಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾ ಧೀನಾನುಭವದಲ್ಲಿದ್ದು ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

6. ರಾಮಕೃಷ್ಣ ಮತ್ತು ದೇವರಾಜು ರವರು ಮರಣ ಹೊಂದಿದ ನಂತರ ದಾವಾಸ್ವತ್ತಿನ ಒಂದು ಭಾಗವನ್ನು ಅಂದರೆ ಕಾನೇಸುಮಾರಿ ನಂ.360/400/ಎ ರಲ್ಲಿ ವಿಸ್ತೀರ್ಣ 25 ಇಂಟು 47 ಅಡಿಯ ಮನೆಯನ್ನು 1ನೇ ಪ್ರತಿವಾದಿ ಮತ್ತು ರಾಮಕೃಷ್ಣ ರವರ ಹೆಂಡತಿ ಕೆ.ವಿ ಜಯಮ್ಮ ರವರು ದಿನಾಂಕ.30.06.2021ರ ನೋಂದಾಯಿತ ವಿಭಾಗ ಪತ್ರದಡಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಪತ್ರದ ಪ್ರಕಾರ ಕಾನೇಸುಮಾರಿ ನಂ.360/400/ಎ ರ ಸ್ವತ್ತು 1ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ಕೆ.ವಿ ಜಯಮ್ಮ ರವರಿಗೆ 8 ಲಕ್ಷ ರೂಪಾಯಿ ಅವರ ಹಿಸ್ಸೆಯ ಬಾಬ್ತು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನೋಂದಾಯಿತ ವಿಭಾಗ ಪತ್ರದ ಆಧಾರದ ಮೇಲೆ ಕಾನೇಸುಮಾರಿ ನಂ.360/400/ಎ ಆಸ್ತಿಗೆ ಸಂಬಂಧಿಸಿದಂತೆ ಖಾತೆಯು ಸಹ 1ನೇ ಪ್ರತಿವಾದಿಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ.30.06.2021ರ ವಿಭಾಗ ಪತ್ರದ ಸಮಯದಲ್ಲಿ ನಿಡಿ-3ರ ಹಿಂಭಾಗದಲ್ಲಿ ಕಾಣಿಸುತ್ತಿರುವ ನಾಡಹೆಂಚಿನ ಮನೆ ಮತ್ತು ಖಾಲಿ ಜಾಗವು ವೆಂಕಟಪ್ಪ ರವರ ಹೆಸರಿನಲ್ಲಿಯೇ ಇದ್ದ ಕಾರಣಕ್ಕೆ ಅದನ್ನು ಆ ವಿಭಾಗ ಪತ್ರದಲ್ಲಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ನಂತರದಲ್ಲಿ ನಿಡಿ-3ರ ಹಿಂಭಾಗದಲ್ಲಿ ಕಾಣಿಸುತ್ತಿರುವ ನಾಡಹೆಂಚಿನ ಮನೆ ಮತ್ತು ಖಾಲಿ ಜಾಗಕ್ಕೆ ಸಂಬಂಧಿಸಿದಂತೆ ಖಾತೆಯನ್ನು 1ನೇ ಪ್ರತಿವಾದಿಯ ಹೆಸರಿಗೆ ಮಾಡಿಸಿಕೊಂಡ ನಂತರ 1ನೇ ಪ್ರತಿವಾದಿ ಮತ್ತು ಕೆ.ವಿ ಜಯಮ್ಮ ರವರು

ದಿನಾಂಕ.01.07.2024ರ ನೋಂದಣಿ ವಿಭಾಗ ಪತ್ರದ ಮೂಲಕ ಆ ಸ್ವತ್ತುಗಳಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ.01.07.2024ರಂದು ಮಾಡಿಕೊಂಡ ವಿಭಾಗ ಪತ್ರದಲ್ಲಿ ಹಿಂಭಾಗದ ನಾಡಹೆಂಚಿನ ಮನೆ ಮತ್ತು ಖಾಲಿ ಜಾಗದ ಆಸ್ತಿಗಳು 1ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಆದೇ ಪ್ರಕಾರ ದಿನಾಂಕ.01.07.2024ರ ವಿಭಾಗ ಪತ್ರದ ಪ್ರಕಾರ ಕೆ.ವಿ ಜಯಮ್ಮ ರವರಿಗೆ ಅವರ ಹಿಸ್ಸೆಯ ಬಾಬ್ತು 4 ಲಕ್ಷ 60 ಸಾವಿರ ರೂಪಾಯಿಯನ್ನು ಕೊಡಲಾಗಿರುತ್ತದೆ ಎಂದರೆ ಸರಿಯಲ್ಲ. ದಿನಾಂಕ.01.07.2024ರ ಪ್ರಕಾರ 1ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಕಾನೇಸುಮಾರಿ ನಂ.360/400ರ ಆಸ್ತಿಗೆ ಸಂಬಂಧಿಸಿದಂತೆ ಖಾತೆಯು ಸಹ ಆಕೆಯ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ.

7. ದಾವಾಸ್ವತ್ತಿನ ಪೂರ್ತಿ ಆಸ್ತಿಯು 1ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಖಾಲಿ ಜಾಗದ ಅರ್ಧ ಭಾಗದಲ್ಲಿ ಪ್ರತಿವಾದಿಗಳು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆದುಕೊಂಡು ಹೊಸದಾಗಿ ಮನೆಯನ್ನು ಸಹ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ಎರಡು ಹಳೆ ಮನೆಗಳಲ್ಲಿ ಮತ್ತು ಒಂದು ಹೊಸ ಮನೆ ಮತ್ತು ಖಾಲಿ ಜಾಗದಲ್ಲಿ ಪ್ರತಿವಾದಿಗಳೆ ಅವರ ಪೂರ್ವಿಕರ ಕಾಲದಿಂದಲ್ಲೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿರುವ ಕಾನೇಸುಮಾರಿ ನಂ.360/400 ಮತ್ತು 360/400/ಎ ಆಸ್ತಿಗಳಿಗೆ ಸಂಬಂಧಿಸಿದಂತೆ ಇರುವ ಪ್ರತಿಯೊಂದು ದಾಖಲೆಗಳು ಪ್ರತಿವಾದಿಗಳ ಹೆಸರಿಗೆ ಬರುತ್ತಿವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿಯು ಉದ್ದೇಶಪೂರ್ವಕವಾಗಿ ಕಾನೇಸುವಾರಿ ಸಂಖ್ಯೆ, ವಿಸ್ತೀರ್ಣ ಮತ್ತು ಚಕ್ಕುಬಂದಿಯನ್ನು ತಪ್ಪಾಗಿ ನಮೂದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ವಾದಿಗಾಗಲೀ

ಅವರ ಪೂರ್ವಿಕರಿಗಾಗಲೀ ಯಾವುದೇ ಪ್ರಕಾರವಾದ ಹಕ್ಕು, ಅಧಿಕಾರ ಮತ್ತು ಸ್ವಾಧೀನಾ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಪ್ರತಿವಾದಿಗಳಿಗೆ ಸೇರಿರುವುದರಿಂದಲ್ಲೆ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿಯಲ್ಲ, ದಾವಾಸ್ವತ್ತಿನ ಮೇಲೆ ವಾದಿಗಾಗಲೀ ಆತನ ತಾಯಿಗಾಗಲೀ ಯಾವುದೇ ಹಕ್ಕು ಅಧಿಕಾರ ಇಲ್ಲದೆ ಇದ್ದರು ಪಂಚಾಯಿತಿ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ಸುಳ್ಳು ದಾಖಲೆಗಳನ್ನು ತಪ್ಪು ಖಾತೆ ಸಂಖ್ಯೆ ತೋರಿಸಿ ತಮ್ಮ ಹೆಸರಿಗೆ ಖಾತೆಗಳನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದ ಖಾತೆಯು ಈಗ ವಾದಿಯ ಹೆಸರಿಗೆ ಇಲ್ಲ ಎಂದರೆ ಸರಿಯಲ್ಲ.

8. ನಾನು ವಾದಿಯ ಸಹೋದರಿಯಾದ ನಾಗರತ್ನ ರವರ ಅಳಿಯ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ನೀವು ವಾಸವಿರುವುದು ಆ ಮನೆಯಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಟೋವನ್ನು ನೋಡಿ ಅಲ್ಲ ಎಂದು ನುಡಿಯುತ್ತಾರೆ. ನನ್ನ ಮನೆಯು ರಂಗನಾಥ ಬಡಾವಣೆಯಲ್ಲಿರುತ್ತದೆ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ನೀವು ಭೋಗ್ಯಕ್ಕೆ ಇರುವುದು ಇದೆ ಮನೆಯಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು  ಪೋಟೋವನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಒಪ್ಪಿ ಕೊಂಡ ಕಾರಣಕ್ಕೆ ಅದನ್ನು ನಿಡಿ-6 ಎಂದು ಗುರುತಿಸಲಾಯಿತು.

9. ದಾವಾಸ್ವತ್ತು ಈಡಿಗರಬೀದಿಯಲ್ಲಿರುತ್ತದೆ. ನನ್ನ ಸ್ವಂತ ಮನೆ ಹಳೆಯ ಅಂಗಡಿ ಬೀದಿಯಲ್ಲಿರುತ್ತದೆ. ಸಾಕ್ಷಿಯು ಮುಂದುವರೆದು ನಮ್ಮ ಮನೆಯ ಹಿಂಭಾಗದಲ್ಲಿಯೇ ದಾವಾಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ. ದಾವಾಸ್ವತ್ತು ಇರುವ ಬೀದಿಯಲ್ಲಿ

ನನಗೆ ಸಂಬಂಧಿಸಿದ ಸೈಟಾಗಲೀ ಮನೆಯಾಗಲೀ ಇಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿ ಆ ಪೋಟೋದಲ್ಲಿ ಕಾಣಿಸುತ್ತಿರುವ ಸೀಮೆಹೆಂಚಿನ ಮನೆಯಲ್ಲಿಯೇ ವಾದಿ ವಾಸವಿರುವುದು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಪೋಟೋವನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಒಪ್ಪಿ ಕೊಂಡ ಕಾರಣಕ್ಕೆ ಅದನ್ನು ನಿಡಿ-7 ಎಂದು ಗುರುತಿಸಲಾಯಿತು. ಈ ದಾವೆಯನ್ನು ವಾದಿಯು ನಿಡಿ-7ರಲ್ಲಿ ಕಾಣಿಸುತ್ತಿರುವ ಸೀಮೇಹೆಂಚಿನ ಮನೆಗೆ ಸಂಬಂಧಿಸಿದಂತೆ ಹೂಡಿಲ್ಲ ಎಂದರೆ ಸರಿ. ನಿಡಿ-7ರಲ್ಲಿ ಕಾಣಿಸುತ್ತಿರುವ ಮನೆಯು ಹಾರೋಹಳ್ಳಿಯ ಹಳೆಯ ಅಂಗಡಿ ಬೀದಿ, ಗರಡಿ ಮನೆಯ ಪಕ್ಕ ಬರುತ್ತದೆ ಎಂದರೆ ಸರಿ. ನಿಡಿ-7ರಲ್ಲಿ ಕಾಣಿಸುತ್ತಿರುವ ಮನೆಯು ವಾದಿಯ ಪೂರ್ವಿಕರ ಮನೆ ಎಂದರೆ ಸರಿ. ನಿಡಿ-7ರಲ್ಲಿ ಕಾಣಿಸುತ್ತಿರುವ ಮನೆಯ ಕಾನೇಸುಮಾರಿ ನಂ.248/269 ಎಂದರೆ ನನಗೆ ಗೊತ್ತಿಲ್ಲ.

10. ವಾದಿಗೆ ಹೆಚ್.ಆರ್ ವೆಂಕಟೇಶ್ ಎಂಬ ಅಣ್ಣ ಇದ್ದಾನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಈಗ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-7ರ ಎಡಭಾಗದಲ್ಲಿ ಕಾಣಿಸುತ್ತಿರುವ ತಿಳಿನೀಲಿ ಬಣ್ಣದ ಮನೆಯು ಸದರಿ ವೆಂಕಟೇಶ್ ರವರಿಗೆ ಸೇರಿದ್ದು ಎಂದರೆ ಸರಿ. ಸದರಿ ತಿಳಿನೀಲಿ ಬಣ್ಣದ ಮನೆಯು ಮತ್ತು ನಿಡಿ-7ರಲ್ಲಿ ಕಾಣಿಸುತ್ತಿರುವ ಸೀಮೆಹೆಂಚಿನ ಮನೆಯು ಎರಡು ಒಂದೇ ಕಾನೇಸುಮಾರಿ ನಂಬರಿಗೆ ಸಂಬಂಧಿಸಿದ್ದವುಗಳು ಎಂದರೆ ಸರಿ. ನಿಡಿ-7ರಲ್ಲಿ ಕಾಣಿಸುತ್ತಿರುವ ಮನೆಗಳನ್ನು ವಾದಿ ಮತ್ತು ಆತನ ಸಹೋದರನಾದ ವೆಂಕಟೇಶ್ ರವರು ದಿನಾಂಕ.22.01.1991ರ ವಿಭಾಗ ಪತ್ರದಡಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರದಡಿಯಲ್ಲಿ ಕಾನೇಸುಮಾರಿ ನಂ.248/269ರಲ್ಲಿ ತಮ್ಮ ಹಿಸ್ಸೆಗೆ ಬಂದ ಮನೆಗೆ ಸಂಬಂಧಿಸಿದಂತೆ ವಾದಿಯು

ಖಾತೆಯನ್ನು ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-7ರಲ್ಲಿ ಕಾಣಿಸುತ್ತಿರುವ ತಿಳಿನೀಲಿ ಬಣ್ಣದ ಮನೆಗೆ ಸಂಬಂಧಿಸಿದಂತೆ ಖಾತೆಯನ್ನು ವೆಂಕಟೇಶ್ ರವರು ತಮ್ಮ ಹೆಸರಿಗೆ ಮಾಡಿಸಿಕೊಂಡು ಆ ಮನೆಯಲ್ಲಿ ಅವರೆ ವಾಸವಿದ್ದರು ಎಂದರೆ ಸರಿ. ವೆಂಕಟೇಶ್ ರವರ ಹಿಸ್ಸೆಗೆ ಬಂದ ಸ್ವತ್ತಿನಲ್ಲಿ ಈಗ ಅವರ ಮಗನಾದ ರಮೇಶ್ ರವರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ. ನಿಡಿ-7ರಲ್ಲಿ ಕಾಣಿಸುತ್ತಿರುವ ಸೀಮೆಹೆಂಚಿನ ಮನೆಯಲ್ಲಿ ವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿ.

11. ನಿಡಿ-7ರಲ್ಲಿ ತೋರಿಸಿದ ಸ್ವತ್ತನ್ನು ಹೊರತುಪಡಿಸಿ ವಾದಿಯ ಹಿಸ್ಸೆಗೆ ಬೇರೆ ಯಾವುದೇ ಆಸ್ತಿಗಳು ವಿಭಾಗ ಪತ್ರದಡಿಯಲ್ಲಿ ಬಂದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಮೇಲೆ ವಾದಿಗೆ ಯಾವುದೇ ಹಕ್ಕು, ಅಧಿಕಾರ ಸ್ವಾಧೀನಾ ಇಲ್ಲದೆ ಇದ್ದರು ಪ್ರತಿವಾದಿಗಳಿಂದ ದಾವಾಸ್ವತ್ತನ್ನು ಹೊಡೆಯಬೇಕೆಂಬ ದುರುದ್ದೇಶದಿಂದ ಸುಳ್ಳು ದಾಖಲೆಗಳ ಆಧಾರದ ಮೇಲೆ ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತು ವಾದಿಗೆ ಯಾವ ವಿಭಾಗ ಪತ್ರದಡಿಯಲ್ಲಿ ಬಂದಿರುತ್ತದೆ ಎಂದು ನಿಮಗೆ ಹೇಳಲು ಆಗುತ್ತದಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ವಾದಿಯ ತಾಯಿಯಾದ ಕೊಂಡಮ್ಮ ರವರು ದಿನಾಂಕ.29.08.2013 ರ ಪಂಚಾಯಿತಿ ಪಾಲುಪರಿಖತ್ ರಡಿಯಲ್ಲಿ ವಾದಿಗೆ ದಾವಾಸ್ವತ್ತಿನಲ್ಲಿ ಹಿಸ್ಸೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತು ವಾದಿಗೆ, ಆತನ ತಾಯಿಯಾದ ಕೊಂಡಮ್ಮಳಿಗೆ ಮತ್ತು ಅವರ ಪೂರ್ವಿಕರಿಗೆ ಹೇಗೆ ಬಂತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ವಾದಿಯ ಪೂರ್ವಿಕರ ಹೆಸರಿಗೆ ಇದ್ದಂತಹ ಯಾವುದೇ ದಾಖಲೆಯನ್ನು ನೋಡಿಲ್ಲ. ದಾವಾಸ್ವತ್ತಿನ ಖಾತೆಯು ಕೊಂಡಮ್ಮ ರವರಿಗಿಂತ ಮೊದಲು ಯಾರ ಹೆಸರಿನಲ್ಲಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ದಾವಾಸ್ವತ್ತು ಪ್ರತಿವಾದಿಗಳಿಗೆ ಸೇರಿದ್ದಾಗಿದ್ದರು

ಅದಕ್ಕೆ ಸಂಬಂಧಿಸಿದಂತೆ ವಾದಿಯ ತಾಯಿಯಾದ ಕೊಂಡಮ್ಮ ರವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಶ್ಯಾಮಿಲಾಗಿ ತಮ್ಮ ಹೆಸರಿಗೆ ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ.

12. ಅಕ್ರಮವಾಗಿ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ಮಾಡಿಸಿಕೊಂಡ ನಂತರ ವಾದಿಯ ತಾಯಿಯಾದ ಕೊಂಡಮ್ಮ ಮತ್ತು ವಾದಿ ಇಬ್ಬರು ಶ್ಯಾಮಿಲಾಗಿ ದಾವಾಸ್ವತ್ತನ್ನು ಪ್ರತಿವಾದಿಗಳಿಂದ ಕಬಳಿಸಬೇಕೆಂಬ ದುರುದ್ದೇಶದಿಂದಲ್ಲೆ ಪಂಚಾಯಿತಿ ಪಾರಿಖತ್ತನ್ನು ಸೃಷ್ಟಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕ.29.08.2013ರ ಪಾರಿಖತ್ತು ನೋಂದಣಿಯಾಗಿದಿಯೋ ಇಲ್ಲವೋ ನನಗೆ ಗೊತ್ತಿಲ್ಲ. ಸೃಷ್ಟಿಸಿಕೊಂಡ ಪಂಚಾಯಿತಿ ಪಾರಿಖತ್ತಿನ ಆಧಾರದ ಮೇಲೆ ದಾವಾಸ್ವತ್ತಿನ ಸ್ವಲ್ಪ ಭಾಗಕ್ಕೆ ಸಂಬಂಧಿಸಿದಂತೆ ಖಾತೆಯನ್ನು ವಾದಿಯು ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅಕ್ರಮವಾಗಿ ವಾದಿ ಖಾತೆ ಮಾಡಿಕೊಂಡಿರುತ್ತಾರೆಂದು ಅದರ ವಿರುದ್ದ ಪ್ರತಿವಾದಿಗಳು ಅಪೀಲು ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ ಖಾತೆಯನ್ನು ವಾದಿ ಯಾವಾಗ ಮಾಡಿಸಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ಖಾತೆಯನ್ನು ಅಕ್ರಮವಾಗಿ ಮಾಡಿಸಿಕೊಂಡಿರುವುದನ್ನು ಬಿಟ್ಟರೆ ದಾವಾಸ್ವತ್ತಿನಲ್ಲಿ ಯಾವತ್ತು ವಾದಿಯಾಗಲೀ ಅಥವಾ ಆತನ ತಾಯಿಯಾಗಲೀ ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

13. ದಾವಾಸ್ವತ್ತಿನಲ್ಲಿ ಪೂರ್ವಪಶ್ಚಿಮ 10.67ಮೀಟರ್ ಮತ್ತು ಉತ್ತರದಕ್ಷಿಣ 21.34 ಮೀಟರ್ ವಿಸ್ತೀರ್ಣದ ಖಾಲಿ ಜಾಗವೇ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿದ್ದ ಖಾಲಿ ಜಾಗದಲ್ಲಿ ಪ್ರತಿವಾದಿಗಳು ಈಗಾಗಲೇ ಮನೆ ಕಟ್ಟಿಕೊಂಡು

ವಾಸವಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ಪ್ರತಿವಾದಿಗಳು ಅವರ ಪೂರ್ವಿಕರ ಕಾಲದಿಂದಲ್ಲೂ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆಯಾಗಲೀ ಪ್ರತಿವಾದಿಗಳ ಕುಟುಂಬದವರ ಬಗ್ಗೆಯಾಗಲೀ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ವಾದಿ ನನ್ನ ಸಂಬಂಧಿಕನಾಗಿರುವ ಕಾರಣಕ್ಕೆ ಆತನಿಗೆ ಸಹಾಯವಾಗಲೀ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ಕನಕಪುರ.